ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಪಿ.ಎಲ್.ಎನ್/ಎಲ್.ಎ.ಕ್ಯೂ-1899/12/2024-25 ದಿನಾಂಕ:20-07-2024

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಅಭಯ ಪಾಟೀಲ್ (ಬೆಳಗಾವಿ ದಕ್ಷಿಣ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1899ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪ್ರಶಾವಿಸ/16ನೇವಿಸ/4ನೇಅ/ಪ್ರ.ಸಂ.1899/2024, ದಿನಾಂಕ:15.07.2024.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಅಭಯ ಪಾಟೀಲ್ (ಬೆಳಗಾವಿ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1899ಕ್ಕೆ ಉತ್ತರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1899
ಉತ್ತರಿಸಬೇಕಾದ ದಿನಾಂಕ	24-07-2024
ಪ್ರಶ್ನೆ ಕೇಳಿದ ಸದಸ್ಯರ ಹೆಸರು	ಶ್ರೀ ಅಭಯ ಪಾಟೀಲ್ (ಬೆಳಗಾವಿ ದಕ್ಷಿಣ)
ಉತ್ತರಿಸಬೇಕಾದ ಸಚಿವರು	ಮಾನ್ಯ ಕೃಷಿ ಸಚಿವರು
ವಿಷಯ	ಸರ್ಕಾರದಿಂದ ದೊರೆಯುವ ಸೌಲಭ್ಯ

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳು ಯಾವುವು; ಬೆಳಗಾವಿ ತಾಲ್ಲೂಕಿನಲ್ಲಿ ರೈತರುಗಳಿಗೆ ಒದಗಿಸಿದ ಸೌಲಭ್ಯಗಳು ಯಾವುವು; (ವರ್ಷವಾರು, ಮತಕ್ಷೇತ್ರವಾರು, ಸೌಲಭ್ಯ/ ಯೋಜನೆವಾರು/ಫಲಾನುಭವಿಗಳ ಹೆಸರು ವಿಳಾಸದ ವಿವರಗಳನ್ನು ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. ಬೆಳಗಾವಿ ತಾಲ್ಲೂಕಿನಲ್ಲಿ ರೈತರುಗಳಿಗೆ ಒದಗಿಸಿದ ಸೌಲಭ್ಯಗಳ (ವರ್ಷವಾರು, ಮತಕ್ಷೇತ್ರವಾರು, ಸೌಲಭ್ಯ/ ಯೋಜನೆವಾರು/ ಫಲಾನುಭವಿಗಳ ಹೆಸರು ವಿಳಾಸದ) ವಿವರಗಳನ್ನು ಅನುಬಂಧ-2ರಲ್ಲಿ ಸಿ.ಡಿ ಮೂಲಕ ನೀಡಲಾಗಿದೆ.
ಆ.	ಪ್ರಸಕ್ತ ಸಾಲಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಸರಕಾರ ಯಾವ ಯಾವ ಬೆಳೆಗಳ ಬಿತ್ತನೆಗೆ ಗುರಿ ಹೊಂದಿತ್ತು; ಎಷ್ಟು ಬಿತ್ತನೆಯಾಗಿದೆ; (ಜಿಲ್ಲಾವಾರು ಮತಕ್ಷೇತ್ರವಾರು, ಬೆಳೆಗಳ ವಿವರ ನೀಡುವುದು)	2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳಿಗೆ 82.48 ಲಕ್ಷ ಹೆಕ್ಟೇರ್ ಗುರಿ ಹೊಂದಲಾಗಿದ್ದು, ಇಲ್ಲಿಯವರೆಗೆ 55.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿರುತ್ತದೆ. ಬೆಳೆವಾರು ಗುರಿ ಹಾಗೂ ಬಿತ್ತನೆ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ. ಜಿಲ್ಲಾವಾರು, ಮತಕ್ಷೇತ್ರವಾರು ಹಾಗೂ ಬೆಳೆಗಳ ಬಿತ್ತನೆ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ.
ಇ	ಹವಾಮಾನ ಆಧಾರಿತ ಬೆಳೆವಿಮಾ ಯೋಜನೆಗೊಳಪಡುವ ಬೆಳೆಗಳು ಯಾವುವು; ಅದಕ್ಕೆ ತಗಲುವ ವಿಮಾ ಮೊತ್ತವೆಷ್ಟು; ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆಯ ಸೌಲಭ್ಯವನ್ನು ಕೋರಿದ ಫಲಾನುಭವಿಗಳ ಹೆಸರು ಮತ್ತು ವಿಳಾಸಗಳ ವಿವರಗಳನ್ನು ಮತಕ್ಷೇತ್ರವಾರು ವಿವಿರ ನೀಡುವುದು.	ಅನ್ವಯಿಸುವುದಿಲ್ಲ

ಈ	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಬೆಳೆಗೆ ವಿಮಾ ಕವಚ ಸೌಲಭ್ಯವನ್ನು ಒದಗಿಸಿದೆ; ಭರಿಸಬೇಕಾದ ವಿಮಾ ಮೊತ್ತ, ಕಂತಿನ ಮೊತ್ತದ ಮಾಹಿತಿಯನ್ನು ನೀಡುವುದು.	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹಂಗಾಮುವಾರು ಅಧಿಸೂಚಿಸಿರುವ 36 ಆಹಾರ ಮತ್ತು ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳ ಪಟ್ಟಿ ಹಾಗೂ ವಿವಿಧ ಬೆಳೆಗಳು, ನಿಗಧಿಪಡಿಸಲಾಗಿರುವ ವಿಮಾ ಮೊತ್ತ ಮತ್ತು ರೈತರ ವಿಮಾ ಕಂತಿನ ವಿವರ ಈ ಕೆಳಕಂಡಂತಿದೆ. ಮುಂಗಾರು ಹಂಗಾಮು:

ಕ್ರ. ಸಂ	ನಿರ್ಧರಿತ ಬೆಳೆಗಳು	ವಿಮಾ ಮೊತ್ತ (ರೂ.)	ರೈತರ ವಿಮಾ ಕಂತು (ಗರಿಷ್ಟ ಶೇ.)	ರೈತರ ವಿಮಾ ಮೊತ್ತ (ಗರಿಷ್ಟ ರೂ.)
1	ಭತ್ತ (ನೀರಾವರಿ)	93250	2	1865.00
2	ಭತ್ತ (ಮಳೆಆಶ್ರಿತ)	63750	2	1275.00
3	ಮುಸುಕಿನಜೋಳ (ನೀರಾವರಿ)	64500	2	1290.00
4	ಮುಸುಕಿನಜೋಳ (ಮಳೆಆಶ್ರಿತ)	56500	2	1130.00
5	ಸಜ್ಜೆ (ನೀರಾವರಿ)	39250	2	785.00
6	ಸಜ್ಜೆ (ಮಳೆಆಶ್ರಿತ)	31500	2	630.00
7	ರಾಗಿ (ನೀರಾವರಿ)	50750	2	1015.00
8	ರಾಗಿ (ಮಳೆಆಶ್ರಿತ)	42500	2	850.00
9	ಜೋಳ (ನೀರಾವರಿ)	45250	2	905.00
10	ಜೋಳ (ಮಳೆಆಶ್ರಿತ)	38250	2	765.00
11	ಸಾವೆ (ಮಳೆಆಶ್ರಿತ)	28250	2	565.00
12	ನವಣೆ (ಮಳೆಆಶ್ರಿತ)	28250	2	565.00
13	ನೆಲಗಡಲೆ(ಶೇಂಗಾ) (ನೀರಾವರಿ)	65750	2	1315.00
14	ನೆಲಗಡಲೆ(ಶೇಂಗಾ) (ಮಳೆಆಶ್ರಿತ)	54500	2	1090.00
15	ಸೂರ್ಯಕಾಂತಿ (ನೀರಾವರಿ)	48750	2	975.00
16	ಸೂರ್ಯಕಾಂತಿ (ಮಳೆಆಶ್ರಿತ)	40750	2	815.00
17	ಸೋಯಾಅವರೆ (ನೀರಾವರಿ)	43000	2	860.00
18	ಸೋಯಾಅವರೆ(ಮಳೆಆಶ್ರಿತ)	41000	2	820.00
19	ತೊಗರಿ (ನೀರಾವರಿ)	50250	2	1005.00
20	ತೊಗರಿ (ಮಳೆಆಶ್ರಿತ)	48000	2	960.00

21	ಉದ್ದು (ಮಳೆಆಶ್ರಿತ)	32750	2	655.00
22	ಹೆಸರು (ಮಳೆಆಶ್ರಿತ)	33250	2	665.00
23	ಎಳ್ಳು (ಮಳೆಆಶ್ರಿತ)	28750	2	575.00
24	ಹುರುಳಿ (ಮಳೆಆಶ್ರಿತ)	20500	2	410.00
25	ಅಲಸಂದೆ (ಮಳೆಆಶ್ರಿತ)	30000	2	600.00
26	ಹತ್ತಿ (ನೀರಾವರಿ)	73750	5	3687.50
27	ಹತ್ತಿ (ಮಳೆಆಶ್ರಿತ)	49750	5	2487.50
28	ಆಲೂಗಡ್ಡೆ (ನೀರಾವರಿ)	148500	5	7425.00
29	ಆಲೂಗಡ್ಡೆ (ಮಳೆಆಶ್ರಿತ)	72250	5	3612.50
30	ಕೆಂಪುಮೆಣಸಿನಕಾಯಿ (ನೀರಾವರಿ)	107500	5	5375.00
31	ಕೆಂಪುಮೆಣಸಿನಕಾಯಿ (ಮಳೆಆಶ್ರಿತ)	78750	5	3937.50
32	ಟೊಮ್ಯಾಟೋ	141500	5	7075.00
33	ಈರುಳ್ಳಿ (ನೀರಾವರಿ)	80500	5	4025.00
34	ಈರುಳ್ಳಿ (ಮಳೆಆಶ್ರಿತ)	75750	5	3787.50
35	ಎಲೆಕೋಸು	75500	5	3775.00
36	ಅರಿಶಿನ	142250	5	7112.50

ಹಿಂಗಾರು ಹಂಗಾಮು:

ಕ್ರ. ಸಂ	ನಿರ್ಧರಿತ ಬೆಳೆಗಳು	ವಿಮಾ ಮೊತ್ತ (ರೂ.)	ರೈತರ ವಿಮಾ ಕಂತು (ಗರಿಷ್ಟ ಶೇ.)	ರೈತರ ವಿಮಾ ಮೊತ್ತ(ಗರಿಷ್ಟ ರೂ.)
1	ಭತ್ತ (ನೀರಾವರಿ)	93250	1.5	1398.75
2	ಜೋಳ (ನೀರಾವರಿ)	45250	1.5	678.75
3	ಜೋಳ (ಮಳೆಆಶ್ರಿತ)	38250	1.5	573.75
4	ರಾಗಿ (ನೀರಾವರಿ)	50750	1.5	761.25
5	ರಾಗಿ (ಮಳೆಆಶ್ರಿತ)	42500	1.5	637.5
6	ಮುಸುಕಿನಜೋಳ (ನೀರಾವರಿ)	64500	1.5	967.5
7	ಮುಸುಕಿನಜೋಳ (ಮಳೆಆಶ್ರಿತ)	56500	1.5	847.5
8	ಗೋಧಿ (ನೀರಾವರಿ)	48500	1.5	727.5
9	ಗೋಧಿ (ಮಳೆಆಶ್ರಿತ)	32250	1.5	483.75
10	ಕಡಲೆ (ನೀರಾವರಿ)	38500	1.5	577.5
11	ಕಡಲೆ (ಮಳೆಆಶ್ರಿತ)	34750	1.5	521.25
12	ಉದ್ದು (ಮಳೆಆಶ್ರಿತ)	32750	1.5	491.25
13	ಹುರುಳಿ(ಮಳೆಆಶ್ರಿತ)	20500	1.5	307.5

14	ಹೆಸರು (ಮಳೆಆಶ್ರಿತ)	33250	1.5	498.75
15	ಅಗಸೆ (ಮಳೆಆಶ್ರಿತ)	16750	1.5	251.25
16	ಸೂರ್ಯಕಾಂತಿ (ನೀರಾವರಿ)	48750	1.5	731.25
17	ಸೂರ್ಯಕಾಂತಿ (ಮಳೆಆಶ್ರಿತ)	40750	1.5	611.25
18	ನೆಲಗಡಲೆ(ಶೇಂಗಾ) (ಮಳೆಆಶ್ರಿತ)	54500	1.5	817.5
19	ಕುಸುಮೆ	31000	1.5	465
20	ಈರುಳ್ಳಿ (ನೀರಾವರಿ)	80500	5	4025
21	ಆಲೂಗೆಡ್ಡೆ	148500	5	7425
22	ಟೊಮ್ಯಾಟೊ	141500	5	7075

ಬೇಸಿಗೆ ಹಂಗಾಮು:

ಕ್ರ. ಸಂ	ನಿರ್ಧರಿತ ಬೆಳೆಗಳು	ವಿಮಾ ಮೊತ್ತ (ರೂ.)	ರೈತರ ವಿಮಾ ಕಂತು (ಗರಿಷ್ಟ ಶೇ.)	ರೈತರ ವಿಮಾ ಮೊತ್ತ(ಗರಿಷ್ಟ ರೂ.)
1	ಭತ್ತ (ನೀರಾವರಿ)	93250	1.5	1398.75
2	ರಾಗಿ (ನೀರಾವರಿ)	50750	1.5	761.25
3	ನೆಲಗಡಲೆ(ಶೇಂಗಾ) (ನೀರಾವರಿ)	65750	1.5	986.25
4	ಸೂರ್ಯಕಾಂತಿ (ನೀರಾವರಿ)	48750	1.5	731.25
5	ಈರುಳ್ಳಿ	80500	5	4025
6	ಟೊಮ್ಯಾಟೊ	141500	5	7075

<table>
<tr>
<td>ಉ</td>
<td>ವಿಮಾ ಕವಚ ಸೌಲಭ್ಯವನ್ನು ಕೋರಿ ಬಂದ ಪ್ರಸ್ತಾವನೆಗಳು ಎಷ್ಟು; ಅವು ಯಾವುವು?
(ಮತಕ್ಷೇತ್ರವಾರು ವಿವರ ನೀಡುವುದು)</td>
<td>2023-24ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಸೌಲಭ್ಯವನ್ನು ಕೋರಿ ಬಂದ ಒಟ್ಟು ರೈತ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಹಂಗಾಮು</th><th>ನೋಂದಾಯಿತವಾಗಿರುವ ರೈತರ ಸಂಖ್ಯೆ</th></tr>
<tr><td rowspan="2">2023-24</td><td>ಮುಂಗಾರು</td><td>40378</td></tr>
<tr><td>ಹಿಂಗಾರು & ಬೇಸಿಗೆ</td><td>21843</td></tr>
<tr><td></td><td>ಒಟ್ಟು</td><td>62221</td></tr>
</table>
ಬೆಳೆ ವಿಮೆ ಯೋಜನೆಯಡಿ ಸೌಲಭ್ಯವನ್ನು ಕೋರಿ ಬಂದ ಒಟ್ಟು ರೈತ ಪ್ರಸ್ತಾವನೆಗಳ ಮತಕ್ಷೇತ್ರವಾರು ವಿವರವನ್ನು ಅನುಬಂಧ-4 ರಲ್ಲಿ ಸಿ.ಡಿ ಮೂಲಕ ನೀಡಲಾಗಿದೆ.</td>
</tr>
</table>

ಕೃಷಿ ನಿರ್ದೇಶಕರು

LAQ-1899

ಅನುಬಂಧ-1

ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳ ವಿವರಗಳು

1. **ಬೀಜಗಳ ಪೂರೈಕೆ:** ಕೃಷಿ ಇಲಾಖೆಯ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಒಟ್ಟಾರೆ ಗರಿಷ್ಟ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ರಿಯಾಯಿತಿಯಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ.

2. **ಸಸ್ಯ ಸಂರಕ್ಷಣೆ:** ಶೇ.50ರ ಸಹಾಯಧನದಡಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.

3. **ಕೃಷಿ ಯಾಂತ್ರೀಕರಣ & ಕೃಷಿ ಸಂಸ್ಕರಣೆ:**
   ಕೃಷಿ ಯಾಂತ್ರೀಕರಣ: ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡಲು ಹಾಗೂ ಕೂಲಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಈ ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತದೆ ಹಾಗೂ 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

   ಕೃಷಿ ಸಂಸ್ಕರಣೆ: ಈ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಟಾರ್ಪಾಲಿನ್ ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಟಾರ್ಪಾಲಿನ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನದಡಿ ನೀಡಲಾಗುವುದು. ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ./ಪ.ಪಂ., ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

4. **ಕೃಷಿ ಯಂತ್ರಧಾರೆ:** ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

5. **ಮಣ್ಣಿನ ಸತ್ವ ಹೆಚ್ಚಿಸುವಿಕೆ:** ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬೀಜ, ಜಿಪ್ಸಂ, ಕೃಷಿ ಸುಣ್ಣ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಾವಯವ ಗೊಬ್ಬರಗಳು ಇತ್ಯಾದಿಗಳ ವಿತರಣೆ ಹಾಗೂ ಎರೆಹುಳು ಗೊಬ್ಬರ ಮತ್ತು ಸಾವಯವ ಗೊಬ್ಬರಗಳ ಉತ್ಪಾದನೆಗೆ ಪ್ರೋತ್ಸಾಹಧನ (ಬಯೋಡೈಜೆಸ್ಟರ್ ಘಟಕ ಸ್ಥಾಪನೆ, ಎರೆಹುಳು ಗೊಬ್ಬರ ಉತ್ಪಾದನಾ ಘಟಕಗಳಿಗೆ ಪ್ರೋತ್ಸಾಹಧನ) ನೀಡಲಾಗಿರುತ್ತದೆ.

6. **ರೈತಶಕ್ತಿ ಯೋಜನೆ:** 2022-23ರ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250.0ರಂತೆ ಗರಿಷ್ಠ 5 ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲಾಗಿರುತ್ತದೆ.

7. **ರೈತ ಸಿರಿ & ಸಾವಯವ ಕೃಷಿ:** ರೈತ ಸಿರಿ ಕಾರ್ಯಕ್ರಮದಡಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಬರಗು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುತ್ತದೆ.

   ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.

8. **ಸಾವಯವ ಇಂಗಾಲ ಅಭಿಯಾನ:** ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ಶೇ. 75ರ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು ಹಾಗೂ ಹಸಿರೆಲೆ ಗೊಬ್ಬರ ಬೀಜ ಮತ್ತು ಸಾವಯವ ಗೊಬ್ಬರಗಳ ಬಳಕೆಯಿಂದ ಸಾವಯವ ಇಂಗಾಲ ಹೆಚ್ಚಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು (ಪ್ರತಿ ಪ್ರಾತ್ಯಕ್ಷಿಕೆಗೆ ರೂ.2500/-) ಆಯೋಜಿಸಲಾಗುವುದು.

9. **ಹೊಸ ಬೆಳೆ ವಿಮಾ ಯೋಜನೆ:** ಈ ಯೋಜನೆಯಡಿ ಪ್ರವಾಹ, ಅನಾವೃಷ್ಟಿ, ಅಕಾಲಿಕ ಮಳೆ ಮತ್ತು ಇತರೆ ನೈಸರ್ಗಿಕ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುತ್ತಿದೆ.

10. **ಬೆಳೆ ಸಮೀಕ್ಷೆ:** ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಂಡ ಖಾಸಗಿ ನಿವಾಸಿಗಳಿಗೆ ಕೇಂದ್ರೀಕೃತ DBT k2 ಮೂಲಕ ಆಧಾರ್ ಆಧಾರಿತ ನೇರ ಗೌರವಧನ ಪಾವತಿ, ಮಾಸ್ಟರ್ ತರಬೇತುದಾರರು ಹಾಗೂ ಜಿಲ್ಲಾ ತಾಂತ್ರಿಕ ಸಲಹೆಗಾರರ ಗೌರವಧನ, ಬೆಳೆ ಸಮೀಕ್ಷೆ ಕುರಿತು ತರಬೇತಿ, ಕಾರ್ಯಾಗಾರ ಆಯೋಜನೆ, ವಿವಿಧ ಮಾಧ್ಯಮಗಳ ಮೂಲಕ ಜಾಹೀರಾತು, ಮುದ್ರಣ, ಸಿ.ಡಿ. ದಾಖಲಾತಿ, ವಿದ್ಯುನ್ಮಾನ ಮತ್ತು ವಿವಿಧ ಮಾಧ್ಯಮಗಳ ಮುಖಾಂತರ ಪ್ರಚಾರಕ್ಕಾಗಿ ತಗಲುವ ವೆಚ್ಚ, ಹೆಲ್ಪ್ ಡೆಸ್ಕ್ ಸಿಬ್ಬಂದಿ ವೇತನ ಹಾಗೂ ತಂತ್ರಾಂಶ ನಿರ್ವಹಣೆ ವೆಚ್ಚ, ಶೇ. 1ರಷ್ಟು ದತ್ತಾಂಶದ

ಪರಿಶೀಲನೆ ಕೈಗೊಳ್ಳುವ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಸಿಬ್ಬಂದಿಗಳಿಗೆ ಗೌರವಧನ, ಬೆಳೆ ಸಮೀಕ್ಷೆ ಕಾರ್ಯತಂಡ ನಿರ್ವಹಣೆ, ಇತರೆ ಕಛೇರಿ ಮತ್ತು ಆಡಳಿತಾತ್ಮಕ ವೆಚ್ಚಕ್ಕಾಗಿ ಅನುದಾವನ್ನು ಉಪಯೋಗಿಸಲಾಗುತ್ತದೆ.

11. **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ:** ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/-ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನು ಪಿ.ಎಂ.ಕಿಸಾನ್ ಕರ್ನಾಟಕ ಯೋಜನೆಯಡಿ ನೀಡಲಾಗಿರುತ್ತದೆ.

12. **ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ:** ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳಿಗೆ ಮತ್ತು ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ. ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ ಇತರೆ ಯಾವುದೇ ಇಲಾಖೆಯು ನೀಡುವ ವಿದ್ಯಾರ್ಥಿ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುವುದಿಲ್ಲ.

13. **ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ:**

ಕೃಷಿ ಪಂಡಿತ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ವಿನೂತನ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ಗಮನಾರ್ಹ ಸಾಧನೆ ಮಾಡಿರುವ ಮತ್ತು ರೈತ ಸಮುದಾಯದ ಅಭಿವೃದ್ಧಿಗಾಗಿ ಕೊಡುಗೆ ನೀಡುತ್ತಿರುವ ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ಪಂಡಿತ ಪ್ರಶಸ್ತಿ ನೀಡಲಾಗುತ್ತಿದೆ. ಈ ಹಿಂದೆ ಕೃಷಿ ಪಂಡಿತ ಪ್ರಶಸ್ತಿ (ಪ್ರಥಮ/ ದ್ವಿತೀಯ/ ತೃತೀಯ/ ಉದಯೋನ್ಮುಖ) ಪಡೆದವರು ಹೊರತುಪಡಿಸಿ ಉಳಿದೆಲ್ಲಾ ರೈತ ಮತ್ತು ರೈತ ಮಹಿಳೆಯರು ಕೃಷಿ ಪಂಡಿತ ಪ್ರಶಸ್ತಿಗೆ ಸ್ಪರ್ಧಿಸಬಹುದಾಗಿರುತ್ತದೆ.

ಕೃಷಿ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ರೈತರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವನೆಯನ್ನು ಉಂಟು ಮಾಡಿ ಅತಿ ಹೆಚ್ಚು ಇಳುವರಿ ಪಡೆಯುವ ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ಪ್ರಶಸಿಯನ್ನು ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಬೆಳೆ ಸ್ಪರ್ಧೆಯಡಿ ವಿಜೇತರಾದವರನ್ನು ಹೊರತುಪಡಿಸಿ ಉಳಿದೆಲ್ಲಾ ರೈತರು ಕೃಷಿ ಪ್ರಶಸ್ತಿಗೆ ಸ್ಪರ್ಧಿಸಬಹುದಾಗಿರುತ್ತದೆ.

14. **ತರಬೇತಿ ಕಾರ್ಯಕ್ರಮಗಳು:** ಈ ಯೋಜನೆಯಡಿ ಕೃಷಿ ವಿಸ್ತರಣಾ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ವಿಶೇಷ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗುತ್ತದೆ.

15. **ಕೃಷಿ ಭಾಗ್ಯ:** ಮಳೆಯಾಶ್ರಿತ ಕೃಷಿ ನೀತಿ, 2014 ರನ್ವಯ 2024-25 ನೇ ಸಾಲಿನಲ್ಲಿ ರಾಜ್ಯದ 5 ಒಣ ಹವಾಮಾನ ವಲಯಗಳ 24 ಬರ ಪೀಡಿತ ಜಿಲ್ಲೆಗಳಲ್ಲಿನ 106 ತಾಲ್ಲೂಕುಗಳಲ್ಲಿ ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ

ಕೃಷಿಯನ್ನಾಗಿ ರೂಪಾಂತರಗೊಳಿಸುವುದು, ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing), ಹೊಂಡದಿಂದ ನೀರು ಎತ್ತಲು ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್, ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ(ತುಂತುರು/ಹನಿ) ನೀರಾವರಿ ಘಟಕಗಳನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಎಲ್ಲಾ ಘಟಕಗಳಿಗೆ (ತಂತಿ ಬೇಲಿ ಹೊರತುಪಡಿಸಿ) ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಸಹಾಯಧನವನ್ನು ಒದಗಿಸಲಾಗುತ್ತದೆ (ಷರಾ: ತಂತಿ ಬೇಲಿ ಘಟಕಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.50 ರಂತೆ ಸಹಾಯಧನ).

16. **ಹೈಟೆಕ್ ಹಾರ್ವೆಸ್ಟರ್ ಹಬ್**- ಬೆಳೆ ಕಟಾವು ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಕೈಗೊಳ್ಳಲು ಹಾಗು ಕಟಾವು ಸಮಯದಲ್ಲಿ ಬೆಳೆ ನಷ್ಟವನ್ನು ತಡೆಗಟ್ಟಲು ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಹಂತ ಹಂತವಾಗಿ ಸ್ಥಾಪಿಸಲು ರಾಜ್ಯದಲ್ಲಿ ಪ್ರಚಲಿತವಿರುವ ಕೃಷಿ ಯಂತ್ರಧಾರೆ ಕೇಂದ್ರಗಳು / ರೈತ ಉತ್ಪಾದಕ ಸಂಸ್ಥೆಗಳು / ಸೇವಾದಾರ ಸಂಸ್ಥೆಗಳು/ವೈಯಕ್ತಿಕ ಫಲಾನುಭವಿಗಳನ್ನು ಒಳಗೊಂಡಂತೆ ಅರ್ಹತೆಯಿರುವ ಸಂಸ್ಥೆಗಳನ್ನು / ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವಶ್ಯಕತೆಯಿರುವ ಪ್ರದೇಶಗಳಲ್ಲಿ Hi-Tech Harvester Hubs ಗಳನ್ನು ಸ್ಥಾಪಿಸಲಾಗುವುದು. ಸದರಿ ಕೇಂದ್ರಗಳಲ್ಲಿ ದಾಸ್ತಾನೀಕರಿಸುವ Hi-Tech ಕಟಾವು / ಒಕ್ಕಣೆ ಯಂತ್ರಗಳಿಗೆ ಸಮನ್ಯ ವರ್ಗದ ರೈತರಿಗೆ ಗರಿಷ್ಠ ಶೇ.50 ರಂತೆ, ಪ.ಜ/ಪ.ಪಂ. ವರ್ಗದ ರೈತರಿಗೆ ಗರಿಷ್ಠ ಶೇ.70 ರಂತೆ ಹಾಗೂ ಸಂಘ-ಸಂಸ್ಥೆಗಳಿಗೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ / FPO ಗಳ ನ್ನೊಳಗೊಂಡಂತೆ) ಗರಿಷ್ಠ ಶೇ.70 ರಂತೆ ಸಹಾಯಧನವನ್ನು ಒದಗಿಸಲಾಗುವುದು. ಪ್ರತಿ ಒಂದು ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಕ್ಕೆ ಗರಿಷ್ಠ ಮೊತ್ತ ರೂ.100.00 ಲಕ್ಷಗಳು ಮೀರದಂತೆ (ರೂ.5.00 ಲಕ್ಷಗಳ ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ) ಸಹಾಯಧನವನ್ನು ಒದಗಿಸಲಾಗುವುದು. ಸದರಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುವುದು. ಈ ಯೋಜನೆಯನ್ನು 2023-24ನೇ ಸಾಲಿನಿದ ಅನುಷ್ಠಾನಗೊಳಿಸಲಾಗುತ್ತಿದೆ.

17. **ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ:** ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅನುಷ್ಠಾನಕ್ಕೆ ತೋಟಗಾರಿಕೆ ಇಲಾಖೆಯು ನೋಡಲ್ ಇಲಾಖೆಯಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಸಣ್ಣ / ಅತಿ ಸಣ್ಣ ರೈತರಿಗೆ ಶೇ.55 ಮತ್ತು ಇತರೇ ವರ್ಗದ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು ಪ್ರತಿಯೊಬ್ಬ ರೈತರಿಗೆ ಗರಿಷ್ಠ 5.0 ಹೆಕ್ಟೇರ್ ಪ್ರದೇಶದವರೆಗೆ ನೀಡಲು ಅವಕಾಶವಿರುತ್ತದೆ. ಇದರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ಇದ್ದು, ರಾಜ್ಯದಲ್ಲಿ ರಾಜ್ಯ ಸರ್ಕಾರದ ವತಿಯಿಂದ ರಾಜ್ಯದ ಪಾಲಿನ ಹೆಚ್ಚುವರಿ ಸಹಾಯಧನವನ್ನು ಸೇರಿಸಿ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

18. **ಆಹಾರ ಮತ್ತು ಪೌಷ್ಟಿಕ ಭದ್ರತೆ (Food and Nutrition Security-FNS)**: ಈ ಯೋಜನೆಯಡಿ ಭತ್ತ, ದ್ವಿದಳಧಾನ್ಯ, TRFA-ದ್ವಿದಳಧಾನ್ಯ, ಒರಟುಧಾನ್ಯ, ನ್ಯೂಟ್ರಿಸಿರಿಧಾನ್ಯ, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ

ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಭತ್ತ, ದ್ವಿದಳಧಾನ್ಯ, ನ್ಯೂಟ್ರಿಸಿರಿಧಾನ್ಯ ಮತ್ತು ಒರಟುಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ನೀರು ಒದಗಿಸುವ ಪೈಪುಗಳು ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಿಗೆ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ನ್ಯೂಟ್ರಿಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತಿದೆ.

19. **ಕೃಷಿ ವಿಸ್ತರಣೆ ಉಪ ಅಭಿಯಾನ (Sub Mission on Agriculture Extension-SMAE):** ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ATMA)ಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅಧಿಕಾರಿ/ ರೈತರ ತರಬೇತಿ, ಪರಿಚಯ ಪ್ರವಾಸ, ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ. ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆ ಅವಕಾಶವಿರುತ್ತದೆ.

20. **ಕೃಷಿ ಯಾಂತ್ರೀಕರಣ ಉಪ ಅಭಿಯಾನ (Sub Mission on Agriculture Mechanisation-SMAM):** ರಾಜ್ಯದಲ್ಲಿ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಲು, ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಹಾಗೂ ಕ್ಷೇತ್ರ ಶಕ್ತಿಯನ್ನು (ಪ್ರಸ್ತುತವಿರುವ 2.115 KW/ Ha to 2.5kW/Ha by 2023 and 4.00kW/ha by 2030) ಹೆಚ್ಚಿಸಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ರೈತರಿಗೆ ಟ್ರ್ಯಾಕ್ಟರ್(45HP ವರೆಗೆ), ಪವರ್ ಟಿಲ್ಲರ್‌ಗಳ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗು ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ.

21. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮ (RKVY):** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ" ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತ್ಯಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವ ಉದ್ದೇಶದಿಂದ ಸಮಗ್ರ ಕೃಷಿ ಪದ್ಧತಿ ಮಾದರಿಗಳ ಅನುಷ್ಠಾನಕ್ಕೆ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 2400 ಸಮಗ್ರ ಕೃಷಿ ಪದ್ಧತಿ

ಮಾದರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ರೂಪಿಸಿದ್ದು ಅದರಂತೆ ಅನುಷ್ಠಾನ ಮಾಡಲಾಗುತ್ತಿದೆ.

22. **ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO-Oilseeds):** ಈ ಯೋಜನೆಯಡಿ ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಲು ನೂತನ/ಸುಧಾರಿತ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಪೀಡೆನಾಶಕಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ, ಕೃಷಿ ಉಪಕರಣಗಳು ಹಾಗೂ ನೀರು ಒದಗಿಸುವ ಪೈಪುಗಳಿಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೇ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಪ್ರತಿ ಕ್ವಿಂಟಾಲ್ ಬಿತ್ತನೆ ಬೀಜೋತ್ಪಾದನೆಗೆ ರೂ.2500/-ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

23. **ಬೆಳೆ ವೈವಿಧ್ಯತೆ ಕಾರ್ಯಕ್ರಮ (Crop Diversification Programme-CDP):** ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಬೆಳೆ ವೈವಿಧ್ಯತೆ ಕಾರ್ಯಕ್ರಮದಡಿ (Crop Diversification Programme) ತಂಬಾಕು ಬೆಳೆಗೆ ಪರ್ಯಾಯ ಬೆಳೆ ಕಾರ್ಯಕ್ರಮವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಸಹಯೋಗದೊಂದಿಗೆ ಅನುಮೋದಿತ ಕ್ರಿಯಾ ಯೋಜನೆಯನ್ವಯ ಬೆಳಗಾವಿ, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ರೈತರನ್ನು ತಂಬಾಕು ಬೆಳೆಯ ಬದಲು ಪರ್ಯಾಯ ಬೆಳೆ ಬೆಳೆಸಲು ಪ್ರೊತ್ಸಾಹಿಸುವುದು ಹಾಗೂ ರೈತರ ಆದಾಯ ಹೆಚ್ಚಿಸಲು ಕೃಷಿ ಜೊತೆಗೆ ಇತರೆ ಆದಾಯ ಬರುವ ಚಟುವಟಿಕೆಗಳನ್ನು ಅಳವಡಿಸಲು ಪ್ರೇರೇಪಿಸುವ ಉದ್ದೇಶದೊಂದಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತದೆ. ಸದರಿ ಕಾರ್ಯಕ್ರಮದಡಿ ತಂಬಾಕು ಬದಲು ಪರ್ಯಾಯ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷಿತೆಗಳು, ಸಮಗ್ರ ಕೃಷಿ ಪದ್ಧತಿಗಳು, ಕೃಷಿ ಹೊಂಡ ನಿರ್ಮಾಣ, ಹಸಿರೆಲೆ ಗೊಬ್ಬರ ಬೀಜ ವಿತರಣೆಗೆ ಶೇಕಡ 50ರ ರಿಯಾಯಿತಿಯಲ್ಲಿ ಸಹಾಯಧನ ನೀಡುವುದರ ಜೊತೆಗೆ ರೈತರಿಗೆ ತರಬೇತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ತೋಟಗಾರಿಕೆ ಇಲಾಖೆಯಡಿ ಯಂತ್ರೋಪಕರಣಗಳ ಬಳಕೆ ಹಾಗೂ ಮೌಲ್ಯವರ್ಧನೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯನ್ನು 2023-24ನೇ ಸಾಲಿನಿದ ಅನುಷ್ಠಾನಗೊಳಿಸಲಾಗುತ್ತಿದೆ.

24. **ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME):** ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಾಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಇಲಾಖೆಯಾಗಿರುತ್ತದೆ.

    ಅಸಂಘಟಿತ ವಲಯದಲ್ಲಿರುವ ಸೂಕ್ಷ್ಮ/ ಕಿರು ಆಹಾರ ಸಂಸ್ಕರಣ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಸಂಘಟಿತ ವಲಯಕ್ಕೆ ತರುವುದು ಹಾಗೂ ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ಹಾಗೂ ಉತ್ಪಾದಕ ಸಹಕಾರಿ ಸಂಘಗಳಿಗೆ ಅವುಗಳ ಸರಪಳಿಕೊಂಡಿಯೊಂದಿಗೆ ಉತ್ತೇಜನ ನೀಡಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40ರ ಅನುಪಾತದಲ್ಲಿ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ.35ರಷ್ಟು ಹಾಗೂ ರಾಜ್ಯ

ಸರ್ಕಾರವು PMFME ಯೋಜನೆಯಡಿಯಲ್ಲಿ ಶೇ.15 ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲಾಗುತ್ತಿದೆ..

25. **ಮಣ್ಣು ಆರೋಗ್ಯ ಮತ್ತು ಫಲವತ್ತತೆ ಯೋಜನೆ (Soil Health & Fertility-SHF):** ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಮಣ್ಣು ಮಾದರಿಗಳನ್ನು ಸಂಗ್ರಹಸಿ, ವಿಶ್ಲೇಷಿಸಿ, ಮಣ್ಣು ಆರೋಗ್ಯ ಚೀಟಿಗಳ ವಿತರಣೆ ಮಾಡಲಾಗುವುದು. ಇಲಾಖೆಯ ಮೂರು ಮಣ್ಣು ಪರೀಕ್ಷಾ ಪ್ರಯೋಗಾಲಯ ಪ್ರಯೋಗಾಲಯಗಳ ಬಲವರ್ಧನೆ. ಇಲಾಖೆಯ 7 ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ NABL ಅಕ್ರಿಡಿಟೇಷನ್ ಮತ್ತು 30 ಮಣ್ಣು ಪರೀಕ್ಷಾ ಪ್ರಯೋಗಾಲಯಗಳ NABL recognition ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ, ಜಲಾನಯನ ಅಭಿವೃದ್ಧಿ ಇಲಾಖೆವತಿಯಿಂದ ಉಪಮೇಲ್ಮೆ ಕಾಲುವೆಗಳ ನಿರ್ಮಾಣದಿಂದ ಸಮಸ್ಯಾತ್ಮಕ ಮಣ್ಣುಗಳ ಪುನಃಶ್ಚೇತನ ಮಾಡಲಾಗುವುದು.

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)

ಅನುಬಂಧ-3 (ಎಲ್.ಎ.ಕ್ಯೂ-1899)

2024-25ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆವಾರು ಗುರಿ ಹಾಗೂ ಬಿತ್ತನೆ ವಿವರಗಳು

(ವಿಸ್ತೀರ್ಣ ಲಕ್ಷ ಹೆಕ್ಟೇರ್ ಗಳಲ್ಲಿ)

ಕ್ರ. ಸಂ.	ಬೆಳೆಗಳು	ಗುರಿಗಳ ವಿಸ್ತೀರ್ಣ	ಬಿತ್ತನೆಯಾದ ವಿಸ್ತೀರ್ಣ (19.07.2024 ರವರೆಗೆ)
I	**ಏಕದಳ ಧಾನ್ಯಗಳು**		
1	ಭತ್ತ	10.60	1.50
2	ಜೋಳ	0.75	0.47
3	ರಾಗಿ	7.30	0.51
4	ಮೆಕ್ಕೆಜೋಳ	15.40	13.40
5	ಸಜ್ಜೆ	1.90	1.11
6	ತೃಣಧಾನ್ಯಗಳು	0.37	0.31
	ಒಟ್ಟು ಏಕದಳ ಧಾನ್ಯಗಳು	**36.33**	**17.30**
II	**ದ್ವಿದಳ ಧಾನ್ಯಗಳು**		
1	ತೊಗರಿ	15.00	13.33
2	ಹುರುಳಿ	0.50	0.01
3	ಉದ್ದು	0.77	0.85
4	ಹೆಸರು	3.99	4.02
5	ಅಲಸಂದೆ ಮತ್ತು ಇತರೆ	0.53	0.58
6	ಅವರೆ	0.40	0.10
7	ಮಟಕಿ	0.01	0.004
	ಒಟ್ಟು ದ್ವಿದಳ ಧಾನ್ಯಗಳು	**21.19**	**18.89**
III	**ಒಟ್ಟು ಆಹಾರ ಧಾನ್ಯಗಳು**	**57.51**	**36.19**
	IV **ಎಣ್ಣೆಕಾಳುಗಳು**		
1	ಶೇಂಗಾ	4.00	1.71
2	ಎಳ್ಳು	0.28	0.12
3	ಸೂರ್ಯಕಾಂತಿ	1.30	0.43
4	ಹರಳು	0.06	0.05
5	ಹುಚ್ಚೆಳ್ಳು	0.03	0.004
6	ಸಾಸಿವೆ	0.01	0.0
7	ಸೋಯಾಅವರೆ	4.10	4.27
	ಒಟ್ಟು ಎಣ್ಣೆಕಾಳುಗಳು	**9.79**	**6.58**
V	**ವಾಣಿಜ್ಯ ಬೆಳೆಗಳು**		
1	ಹತ್ತಿ	8.00	6.04
2	ಕಬ್ಬು	6.40	5.82
3	ತಂಬಾಕು	0.77	0.86
	ಒಟ್ಟು ವಾಣಿಜ್ಯ ಬೆಳೆಗಳು	**15.18**	**12.72**
	ಒಟ್ಟು ವಿಸ್ತೀರ್ಣ	**82.48**	**55.49**

ಮೂಲ: ಜಿಲ್ಲಾ ಜಂಟಿ ನಿರ್ದೇಶಕರುಗಳಿಂದ ಕ್ರೋಢಿಕರಿಸಿದ ವಾರಾಂತ್ಯದ ವಿವರ

ಷರಾ: ಅಂತಿಮ ಉತ್ಪಾದನೆಯನ್ನು ಬೆಳೆ ಕಟಾವು ಪ್ರಯೋಗಗಳ ಇಳುವರಿ ಆಧಾರದ ಮೇಲೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಅಂದಾಜಿಸಲಾಗುತ್ತದೆ.

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)

ಅನುಬಂಧ-3(LAQ-1899)

ಜಿಲ್ಲಾವಾರು, ಮತಕ್ಷೇತ್ರವಾರು ಕೃಷಿ ಬೆಳೆಗಳ ಅಂದಾಜು ಬಿತ್ತನೆ ವಿಸ್ತೀರ್ಣ(ಹೆಕ್ಟೇರ್ ಗಳಲ್ಲಿ)

ಕ್ರ.ಸಂ	ಜಿಲ್ಲೆಯ ಹೆಸರು	ಕ್ರ.ಸಂ	ಮತಕ್ಷೇತ್ರದ ಹೆಸರು	ಭತ್ತ	ಜೋಳ	ರಾಗಿ	ಮುಸುಕಿನಜೋಳ	ಸಜ್ಜೆ	ತೃಣ ಧಾನ್ಯಗಳು	ತೊಗರಿ	ಹುರುಳಿ	ಉದ್ದು	ಹೆಸರು	ಅಲಸಂದೆ ಮತ್ತು ...	ಅವರೆ	ಮಟಕಿ	ಶೇಂಗಾ	ಎಳ್ಳು	ಸೂರ್ಯಕಾಂತಿ	ಹರಳು	ಹುಚ್ಚೆಳ್ಳು	ಸಾಸಿವೆ	ಸೋಯಾಅವರೆ	ಹತ್ತಿ	ಕಬ್ಬು	ತಂಬಾಕು	ಒಟ್ಟು
1	ಬಾಗಲಕೋಟೆ	1	ಬಾಗಲಕೋಟೆ	0	0	0	2100	1470	0	5250	2	29	2660	7	0.2	8	3	10	427	0	2	0	24	70	5539	0	17601.2
		2	ಬದಾಮಿ	27	262	0	8160	3522	61	4450	16	20	10075	17	2	104	200	6	1215	2	104	0	14	140	13110	0	41507
		3	ಬೀಳಗಿ	0	135	0	8990	3425	30	5155	3	570	5400	23	1	57	100	3	1122	0	50	0	138	155	27183	0	52540
		4	ಮುಧೋಳ	0	0	0	2765	55	0	95	0	1720	3880	0	0	0	0	0	45	0	0	0	1610	10	33940	0	44120
		5	ಜಮಖಂಡಿ	0	0	0	7650	0	0	3250	0	1150	1060	0	0	0	70	0	25	0	0	0	775	0	33250	0	47230
		6	ತೇರದಾಳ	0	0	0	2085	0	0	0	0	325	375	0	0	0	25	0	0	0	0	0	510	0	20400	0	23720
		7	ಹುನಗುಂದ	0	0	0	4657	3494	0	31321	16	81	2823	87	0.8	104	21	89	98	0	21	0	37	1502	2981	0	47332.8
			ಜಿಲ್ಲೆಯ ಒಟ್ಟು	**27**	**397**	**0**	**36407**	**11966**	**91**	**49521**	**37**	**3895**	**26273**	**134**	**4**	**273**	**419**	**108**	**2932**	**2**	**177**	**0**	**3108**	**1877**	**136403**	**0**	**274051**
2	ಬಳ್ಳಾರಿ	1	ಬಳ್ಳಾರಿ(ನ)	0	0.6	0	33	61	50	167	0	0	0	0		0	11	0	22	0	0	0	0	13	15	0	372.6
		2	ಬಳ್ಳಾರಿ(ಗ್ರಾ)	0	0.6	0	33	61	50	167	0	0	0	0	0	0	10	0	22	0	0	0	0	12	15	0	370.6
		2	ಸಿರುಗುಪ್ಪ	0	75	0	270	375	340	829	0	0	0	0	0	0	45	0	0	0	0	0	0	11806	0	0	13740
		3	ಕಂಪ್ಲಿ	955	0	5	405	25	30	55	0	0	0	0	0	0	0	0	110	0	0	0	0	300	20	0	1905
		4	ಸಂಡೂರು	0	2385	23	6851	277	4	163	0	0	0	0	0	0	23	14	58	0	0	0	0	338	103	0	10239
			ಜಿಲ್ಲೆಯ ಒಟ್ಟು	**955**	**2461.2**	**28**	**7592**	**799**	**474**	**1381**	**0**	**0**	**0**	**0**	**0**	**0**	**89**	**14**	**212**	**0**	**0**	**0**	**0**	**12469**	**153**	**0**	**26627.2**
3	ಬೆಳಗಾವಿ	1	ಅಥಣಿ	0	0	0	11105	55	0	8462	0	4938	77.6	0	0	0	642	0	0	0	0	0	484	0	27322	0	53085.6
		2	ಕಾಗವಾಡ	0	0	0	9269	50	0	3919	0	6775	100	50	10	0	556	0	0	0	0	0	681	0	26413	0	47823
		3	ಬೈಲಹೊಂಗಲ್	34	322	5	4715	59	0	25	0	2828.8	5525.4	10	0	0	51	0	0	0	0	0	22311	3326.2	5540	21	44773
		4	ಕಿತ್ತೂರ	1610	0	0	5834	0	0	32	0	28	121	10	0	0	566	8	11	0	0	0	30307	1804	13600	0	53931
		5	ಬೆಳಗಾವಿ ಗ್ರಾಮೀಣ	8400	140	187	400	10	0	19	5	15	35	27	155	0	1700	0	0	0	0	0	8650	900	5850	0	26493
		6	ಬೆಳಗಾವಿ ದಕ್ಷಿಣ	4000	0	50	0	0	0	10	0	0	10	0	30	0	100	0	0	0	0	0	200	50	0	0	4450
		7	ಬೆಳಗಾವಿ ಉತ್ತರ	255	0	0	0	0	0	0	0	0	0	0	0	0	0	0	0	0	0	0	0	0	0	0	255
		8	ಚಿಕ್ಕೋಡಿ-ಸದಲಗಾ	0	428	8	9310	1	41	6	0	694	214	50	14	0	6234	0	0	0	0	0	9882	12	34188	0	61082
		9	ನಿಪ್ಪಾಣಿ	0	899	0	3784	0	5	14	0	350	176	20	12	0	4929	0	0	0	0	0	10215	27	18939	0	39370
		10	ಗೋಕಾಕ	0	350	0	8560	20	15	0	0	0	140	0	0	0	50	0	60	0	0	0	610	450	30500	0	40755
		11	ಅರಬಾವಿ	0	0	0	12160	0	0	0	0	50	640	0	0	0	100	0	260	0	0	0	575	0	42850	0	56635
		12	ಹುಕ್ಕೇರಿ	453	3150.7	3.5	4340	8	26	73.5	0	142.8	163.1	66.5	14	0	2490.2	0	0	0	0	0	18589	1797	10364	0	41680.8
		13	ಯಮಕನಮರಡಿ	2025	1430.3	5	2410	18	60	91.5	0	66.2	74.9	51	24	0	2405.8	0	0	0	0	0	9214.5	5006	5241	0	28123.2
		14	ಖಾನಾಪೂರ	24300	0	48	685	0	0	0	0	0	0	0	0	0	505	0	0	0	0	0	0	148	18080	0	43766
		15	ರಾಯಬಾಗ	0	1105	0	7378	0	0	4	0	187	227	4	44	0	1459		0	0	0	0	1630	578	20373	0	32989
		16	ಕುಡಚಿ	0	0	0	3845	0	0	0	0	124	85	4	30	0	72		16	0	0	0	319	36	26421	0	30952
		17	ರಾಮದುರ್ಗ	0	730	0	18136	5933	120	596	88	175	19190	30	25	0	345	0	1320	0	0	0	0	440	11825	0	58953
		18	ಸವದತ್ತಿ-ಯಲ್ಲಮ್ಮ	0	35	0	11085	387	0	0	0	1200.2	13112.6	0	0	0	247	0	437	0	0	0	46.4	7225.8	11609	0	45385
			ಜಿಲ್ಲೆಯ ಒಟ್ಟು	**41077**	**8590**	**306.5**	**113016**	**6541**	**267**	**13252**	**93**	**17574**	**39891.6**	**322.5**	**358**	**0**	**22452**	**8**	**2104**	**0**	**0**	**0**	**113713**	**21800**	**309115**	**21**	**710501.6**
4	ಬೆಂಗಳೂರು ಗ್ರಾಮಾಂತರ	1	ದೇವನಹಳ್ಳಿ	0	0	68	75	0	0	50	0	0	1	5	48	0	0	0	0	0	0	0	0	0	0	0	247
		2	ಹೊಸಕೋಟೆ	0	0	140	75	0	0	110	0	0	0	15	0	0	5	0	0	0	0	0	0	0	0	0	345
		3	ದೊಡ್ಡಬಳ್ಳಾಪುರ	0	0	4218	1449	0	0	250	0	0	0	25	22	0	148	0	0	0	0	0	0	0	0	0	6112
		4	ನೆಲಮಂಗಲ	0	0	152	10	0	0	279	0	0	2	24	288	0	4	0	0	0	0	0	0	0	0	0	759
			ಜಿಲ್ಲೆಯ ಒಟ್ಟು	**0**	**0**	**4578**	**1609**	**0**	**0**	**689**	**0**	**0**	**3**	**69**	**358**	**0**	**157**	**0**	**0**	**0**	**0**	**0**	**0**	**0**	**0**	**0**	**7463**
5	ಬೆಂಗಳೂರು ನಗರ	1	ಯಶವಂತಪುರ	0	9	93	83	0	0	115	0	1	3	72	112	0	38	0	0	3	5	0	0	0	0	0	534
		2	ಬೆಂಗಳೂರು ದಕ್ಷಿಣ	0	0	245	40	0	0	58	0	1	2	24	85	0	24	2	0	4	2	3	0	0	0	0	490

ಕ್ರ. ಸಂ	ಜಿಲ್ಲೆ ಯ ಹೆಸರು	ಕ್ರ. ಸಂ	ಮತಕ್ಷೇತ್ರದ ಹೆಸರು	ಭತ್ತ	ಜೋಳ	ರಾಗಿ	ಮುಸುಕಿನಜೋಳ	ಸಜ್ಜೆ	ತೃಣ ಧಾನ್ಯ ಗಳು	ತೊಗರಿ	ಹುರುಳಿ	ಉದ್ದು	ಹೆಸರು	ಅಲಸಂದೆ ಮತ್ತು ಇತರೆ	ಅವರೆ	ಮಟಕಿ	ಶೇಂಗಾ	ಎಳ್ಳು	ಸೂರ್ಯಕಾಂತಿ	ಹರಳು	ಹುಚ್ಚೆಳ್ಳು	ಸಾಸಿವೆ	ಸೋಯಾಅವರೆ	ಹತ್ತಿ	ಕಬ್ಬು	ತಂಬಾಕು	ಒಟ್ಟು
		3	ಆನೇಕಲ್	0	0	355	0	0	0	180	0	3	8	43	115	0	45	8	0	6	4	2	0	0	0	0	789
		4	ಯಲಹಂಕ	5	0	700	25	0	0	32	0	0	0	12	6	0	2	0	0	0	0	1	1	0	0	0	784
		5	ಬ್ಯಾಟರಾಯನಪುರ	5	0	280	5	0	0	20	0	0	0	6	2	0	0	0	0	0	0	1	0	0	0	0	319
		6	ಮಹದೇವಪುರ	1	0	100	0	0	0	5	0	0	0	3	1	0	0	0	0	0	0	0	0	0	0	0	110
		7	ಕೆ.ಆರ್.ಪುರಂ	0	0	5	0	0	0	0	0	0	0	0	0	0	0	0	0	0	0	0	0	0	0	0	5
		8	ಹೆಬ್ಬಾಳ	0	0	0	0	0	0	0	0	0	0	0	0	0	0	0	0	0	0	0	0	0	0	0	0
			ಜಿಲ್ಲೆಯ ಒಟ್ಟು	**11**	**9**	**1778**	**153**	**0**	**0**	**410**	**0**	**5**	**13**	**160**	**321**	**0**	**109**	**10**	**0**	**13**	**11**	**7**	**1**	**0**	**0**	**0**	**3011**
6	ಬೀದರ್	1	ಬೀದರ	200	1250	0	200	220	10	15590	0	3100	4480	40	50	0	2	30	0	51	0	0	21950	485	4650	0	52308
		2	ಔರಾದ	55	900	0	100	150	5	28000	0	3125	3190	20	60	0	0	10	0	0	0	0	67100	1080	2000	0	105795
		3	ಭಾಲ್ಕಿ	0	950	0	90	100	10	27460	0	3680	4800	0	0	0	0	0	0	0	0	0	57010	0	4210	0	98310
		4	ಬಸವಕಲ್ಯಾಣ	130	2090	0	340	1340	5	31840	35	3080	4150	30	70	0	0	0	0	0	0	0	46110	0	3150	0	92370
		5	ಹುಮನಾಬಾದ	50	1560	0	200	450	10	18500	0	3100	4210	125	60	0	0	20	0	20	0	0	28250	0	2800	0	59355
			ಜಿಲ್ಲೆಯ ಒಟ್ಟು	**435**	**6750**	**0**	**930**	**2260**	**40**	**121390**	**35**	**16085**	**20830**	**215**	**240**	**0**	**2**	**60**	**0**	**71**	**0**	**0**	**220420**	**1565**	**16810**	**0**	**408138**
7	ಚಾಮರಾಜನಗರ	1	ಚಾಮರಾಜನಗರ	0	850	0	663	0	0	5	0	181	82	58	0	0	110	125	316	5	0	0	0	0	113	0	2508
		2	ಗುಂಡ್ಲುಪೇಟೆ	0	11779	94	1647	6	12	561	0	116	100	725	75	0	1481	103	11795	135	4	0	0	2760	106	60	31559
		3	ಕೊಳ್ಳೇಗಾಲ	0	0	25	995	0	0	50	0	916	571	101	0	0	4	20	80	0	0	0	0	0	898	0	3660
		4	ಹನೂರು	0	0	164	2439	274	6	0	3	199	89	86	0	0	274	654	58	5	7	0	0	0	255	0	4513
			ಜಿಲ್ಲೆಯ ಒಟ್ಟು	**0**	**12629**	**283**	**5744**	**280**	**18**	**616**	**3**	**1412**	**842**	**970**	**75**	**0**	**1869**	**902**	**12249**	**145**	**11**	**0**	**0**	**2760**	**1372**	**60**	**42240**
8	ಚಿಕ್ಕಬಳ್ಳಾಪುರ	1	ಚಿಂತಾಮಣಿ	110	80	2240	1220	0	10	492	0	0	0	20	205	0	2610	0	0	8	1	0	0	0	0	0	6996
		2	ಬಾಗೇಪಲ್ಲಿ	5	60	350	8205	0	10	410	0	0	0	10	85	0	3805	1	4	2	1	1	0	0	0	0	12949
		3	ಚಿಕ್ಕಬಳ್ಳಾಪುರ	0	0	1240	1320	0	5	180	0	0	0	30	60	0	215	0	0	0	2	2	0	0	0	0	3054
		4	ಗೌರಿಬಿದನೂರು	12	0	626	18395	0	4	788	0	0	0	20	150	0	694	1	4	40	2	1	0	0	0	0	20737
		5	ಗುಡಿಬಂಡೆ	2	0	930	1745	0	2	92	0	0	0	15	60	0	320	0	0	2	0	0	0	0	0	0	3168
		6	ಶಿಡ್ಲಘಟ್ಟ	0	0	280	1341	0	0	120	0	0	0	3	70	0	190	0	0	10	1	0	0	0	0	0	2015
			ಜಿಲ್ಲೆಯ ಒಟ್ಟು	**129**	**140**	**5666**	**32226**	**0**	**31**	**2082**	**0**	**0**	**0**	**98**	**630**	**0**	**7834**	**2**	**8**	**62**	**7**	**4**	**0**	**0**	**0**	**0**	**48919**
9	ರು	1	ಚಿಕ್ಕಮಗಳೂರು	145	32	2796	1865	0	0	115	0	58	70	710	0	0	195	265	185	26	0	0	0	1323	188	0	7973
		2	ಕಡೂರು	0	97	13254	1274	0	326	328	0	311	851	769	10	0	1319	380	633	73	0	0	0	260	45	0	19930
		3	ತರೀಕೆರೆ	0	0	0	3790	0	70	128	0	59	102	292	100	0	963	0	0	18	2	0	0	0	70	0	5594
		4	ಮೂಡಿಗೆರೆ	115	0	0	235	0	0	5	0	0	0	5	0	0	40	0	0	0	0	0	0	0	80	0	480
		5	ಶೃಂಗೇರಿ	0	0	0	0	0	0	0	0	0	0	0	0	0	0	0	0	0	0	0	0	0	0	0	0
			ಜಿಲ್ಲೆಯ ಒಟ್ಟು	**260**	**129**	**16050**	**7164**	**0**	**396**	**576**	**0**	**428**	**1023**	**1776**	**110**	**0**	**2517**	**645**	**818**	**117**	**2**	**0**	**0**	**1583**	**383**	**0**	**33977**
10	ಚಿತ್ರದುರ್ಗ	1	ಚಳ್ಳಕೆರೆ	10	0	10	1910	5	1625	2790	0	0	5	5	0	0	16858	0	215	50	0	0	4	215	0	0	23702
		2	ಚಿತ್ರದುರ್ಗ	0	0	550	37045	0	43	2292	0	0	32	92	640	0	3970	0	2416	5	0	0	16	693	0	0	47794
		3	ಹಿರಿಯೂರು	15	79	1200	3317	0	513	1925	0	0	939	31	0	0	4310	0	485	96	0	0	20	1322	0	0	14252
		4	ಹೊಳಲ್ಕೆರೆ	0	0	1020	38096	0	30	297	0	0	0	75	0	0	126	0	0	2	0	0	0	64	0	0	39710
		5	ಹೊಸದುರ್ಗ	0	0	250	1860	0	24170	57	0	0	480	90	0	0	770	3	0	40	0	0	0	665	0	0	28385
		6	ಮೊಳಕಾಲ್ಮೂರು	20	440	157	810	337	0	990	30	0	53	10	0	0	1507	150	201	315	0	0	0	4255	0	0	9275
			ಜಿಲ್ಲೆಯ ಒಟ್ಟು	**45**	**519**	**3187**	**83038**	**342**	**26381**	**8351**	**30**	**0**	**1509**	**303**	**640**	**0**	**27541**	**153**	**3317**	**508**	**0**	**0**	**40**	**7214**	**0**	**0**	**163118**
11	ದಕ್ಷಿಣ ಕನ್ನಡ	1	ಮಂಗಳೂರು	300	0	0	0	0	0	0	0	0	0	0	0	0	0	0	0	0	0	0	0	0	0	0	300
		2	ಮಂಗಳೂರು ಉತ್ತ	337	0	0	0	0	0	0	0	0	0	0	0	0	0	0	0	0	0	0	0	0	0	0	337
		3	ಮಂಗಳೂರು ದಕ್ಷಿ	113	0	0	0	0	0	0	0	0	0	0	0	0	0	0	0	0	0	0	0	0	0	0	113
		4	ಮುಲ್ಕಿ ಮೂಡಬಿದ	1610	0	0	0	0	0	0	0	0	0	0	0	0	0	0	0	0	0	0	0	0	0	0	1610
		5	ಬಂಟ್ವಾಳ	275	0	0	0	0	0	0	0	0	0	0	0	0	0	0	0	0	0	0	0	0	0	0	275

ಕ್ರ. ಸಂ	ಜಿಲ್ಲೆಯ ಹೆಸರು	ಕ್ರ. ಸಂ	ಮತಕ್ಷೇತ್ರದ ಹೆಸರು	ಭತ್ತ	ಜೋಳ	ರಾಗಿ	ಮುಸುಕಿನಜೋಳ	ಸಜ್ಜೆ	ತೃಣ ಧಾನ್ಯಗಳು	ತೊಗರಿ	ಹುರುಳಿ	ಉದ್ದು	ಹೆಸರು	ಅಲಸಂದೆ ಮತ್ತು ...	ಅವರೆ	ಮಟಕಿ	ಶೇಂಗಾ	ಎಳ್ಳು	ಸೂರ್ಯಕಾಂತಿ	ಹರಳು	ಹುಚ್ಚೆಳ್ಳು	ಸಾಸಿವೆ	ಸೋಯಾಅವರೆ	ಹತ್ತಿ	ಕಬ್ಬು	ತಂಬಾಕು	ಒಟ್ಟು
		6	ಬೆಳ್ತಂಗಡಿ	900	0	0	0	0	0	0	0	0	0	0	0	0	0	0	0	0	0	0	0	0	0	0	900
		7	ಪುತ್ತೂರು	193	0	0	0	0	0	0	0	0	0	0	0	0	0	0	0	0	0	0	0	0	0	0	193
		8	ಸುಳ್ಯ	105	0	0	0	0	0	0	0	0	0	0	0	0	0	0	0	0	0	0	0	0	0	0	105
			ಜಿಲ್ಲೆಯ ಒಟ್ಟು	**3833**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**3833**
12	ದಾವಣಗೆರೆ	1	ಹರಿಹರ	250	45	15	8246	0	0	409	0	0	5	111	0	0	0	0	0	0	0	0	130	0	20	0	8966
		2	ಜಗಳೂರು	0	225	479	34811	421	18	3964	15	0	15	41	200	0	4150	15	880	10	5	0	10	1895	0	0	47154
		3	ಚನ್ನಗಿರಿ	0	80	1251	25763	0	94	2919	10	0	5	825	53	0	0	0	0	0	0	0	46	152	0	0	31198
		4	ಹೊನ್ನಾಳಿ	0	305	1730	26932	0	31	2638	4	5	52	600	70	10	900	20	20	12	29	32	80	350	60	0	33880
		5	ಮಾಯಕೊಂಡ	0	215	180	26317	0	8	3130	1	1	1	314	8	0	62	0	0	0	3	1	7	20	45	0	30313
		6	ದಾವಣಗೆರೆ ಉತ್ತರ	0	5	0	3430	0	1	500	1	1	1	95	3	0	0	0	0	0	0	1	5	0	150	0	4193
		7	ದಾವಣಗೆರೆ ದಕ್ಷಿಣ	0	5	0	3430	0	1	500	1	1	1	95	3	0	0	0	0	0	0	1	5	0	150	0	4193
			ಜಿಲ್ಲೆಯ ಒಟ್ಟು	**250**	**880**	**3640**	**128929**	**421**	**153**	**14060**	**32**	**8**	**80**	**2081**	**337**	**10**	**5112**	**35**	**900**	**22**	**37**	**35**	**283**	**2417**	**425**	**0**	**160147**
13	ಧಾರವಾಡ	1	ಧಾರವಾಡ	5113	9	2	7675	0	4	80	0	9873	10780	3	0	0	1593	0	0	0	0	0	16448	2638	3090	0	57308
		2	ಹುಬ್ಬಳ್ಳಿ-ಧಾರವಾ	5	4	0	410	0	0	6	0	240	258	0	0	0	188	0	0	0	0	0	1500	34	30	0	2675
		3	ಹುಬ್ಬಳ್ಳಿ-ಧಾರವಾ	2	1	0	190	0	0	3	0	110	144	0	0	0	92	0	0	0	0	0	720	17	0	0	1279
		4	ಹುಬ್ಬಳ್ಳಿ-ಧಾರವಾ	3	0	0	350	0	0	6	0	200	318	0	0	0	180	0	0	0	0	0	1380	34	20	0	2491
		5	ಕಲಘಟಗಿ	5471	0	0	19143	0	0	78	0	0	0	0	0	0	2	0	0	0	0	0	10650	8	7397	0	42749
		6	ಕುಂದಗೋಳ	205	0	5	14979	0	55	5	0	3364	14406	0	0	0	11610	2	0	0	5	0	8904	11070	290	0	64900
		7	ನವಲಗುಂದ	0	0	0	6850	0	0	9	0	1300	68900	0	0	0	2925	0	0	0	0	0	330	18450	0	0	98764
			ಜಿಲ್ಲೆಯ ಒಟ್ಟು	**10799**	**14**	**7**	**49597**	**0**	**59**	**187**	**0**	**15087**	**94806**	**3**	**0**	**0**	**16590**	**2**	**0**	**0**	**5**	**0**	**39932**	**32251**	**10827**	**0**	**270166**
14	ಗದಗ	1	ಗದಗ	0	0	0	13140	0	0	80	0	0	37150	0	0	0	8897	0	260	0	0	0	25	0	10	0	59562
		2	ಶಿರಹಟ್ಟಿ	1725	665	0	48340	390	53	695	10	40	9770	45	25	8	11230	30	1972	0	42	0	50	8140	1645	0	84875
		3	ರೋಣ	0	1700	0	27830	918	82	380	34	17	65814	117	30	10	7795	35	6030	0	40	0	18	1833	530	0	113213
		4	ನರಗುಂದ	1725	0	0	13270	0	0	0	0	0	19000	0	0	0	0	0	0	0	0	0	0	3900	0	0	37895
			ಜಿಲ್ಲೆಯ ಒಟ್ಟು	**3450**	**2365**	**0**	**102580**	**1308**	**135**	**1155**	**44**	**57**	**131734**	**162**	**55**	**18**	**27922**	**65**	**8262**	**0**	**82**	**0**	**93**	**13873**	**2185**	**0**	**295545**
15	ಹಾಸನ	1	ಅರಕಲಗೂಡು	0	0	20	20700	0	0	45	0	30	40	700	0	0	75	0	0	0	0	0	0	0	0	7450	29060
		2	ಅರಸೀಕೆರೆ	0	0	1800	2355	0	0	125	0	180	595	1450	20	0	20	0	0	10	0	0	0	0	0	0	6555
		3	ಹಾಸನ	0	0	0	10850	0	0	0	0	0	0	20	0	0	0	0	0	0	0	0	0	0	0	0	10870
		4	ಬೇಲೂರು	0	0	125	11972	0	0	105	0	104	225	1452	13	0	30	205	10	5	0	8	0	250	4	0	14508
		5	ಶ್ರವಣಬೆಳಗೊಳ	0	54	910	2287	0	0	21	0	25	116	1050	0	0	0	15	0	0	0	0	0	0	143	0	4621
		6	ಹೊಳೆನರಸೀಪುರ	0	0	575	13120	0	0	20	0	8	30	974	0	0	0	80	0	0	0	0	0	0	700	2920	18427
		7	ಸಕಲೇಶಪುರ	120	0	0	15800	0	0	20	0	10	0	80	0	0	0	0	0	0	0	0	0	0	0	0	16030
			ಜಿಲ್ಲೆಯ ಒಟ್ಟು	**120**	**54**	**3430**	**77084**	**0**	**0**	**336**	**0**	**357**	**1006**	**5726**	**33**	**0**	**125**	**300**	**10**	**15**	**0**	**8**	**0**	**250**	**847**	**10370**	**100071**
16	ಹಾವೇರಿ	1	ಹಾವೇರಿ	458	30	0	54857.5	0	34	284	0	4	262	5.5	0	0	6740.5	0	0	0	0	0	4147	6657.5	1928	0	75408
		2	ಹಾನಗಲ್	7002	10	7	26317	0	3	2	2	0	5	2	5	0	836	0	0	0	0	0	2110	1143	2575	0	40019
		3	ಶಿಗ್ಗಾಂವ್	7017	32	2	33412.5	0	147	95	60	2	212	21.5	6	1	7698.5	1	0	3	2	0	4727	7807.5	617	0	61864
		4	ಬ್ಯಾಡಗಿ	49	2	2	25774	0	2	15	0	1	2	1	8	2	637	1	0	0	1	0	430	1874	368	0	29169
		5	ಹಿರೇಕೆರೂರ	0	0	4	46201	0	0	16	0	0	6.5	4	167	0	158	0	0	0	0	0	122	3000	370	0	50048.5
		6	ರಾಣೇಬೆನ್ನೂರು	0	9	13	41854	0	2	188	5	11	90	28	43	7	341	4	32	2	7	0	572	1271	872	0	45351
			ಜಿಲ್ಲೆಯ ಒಟ್ಟು	**14526**	**83**	**28**	**228416**	**0**	**188**	**600**	**67**	**18**	**577.5**	**62**	**229**	**10**	**16411**	**6**	**32**	**5**	**10**	**0**	**12108**	**21753**	**6730**	**0**	**301859.5**
17	ಕಲಬುರಗಿ	1	ಅಫಜಲಪೂರ	0	0	0	251	16	0	50462	15	128	438	1	14	5	0	7	56	0	0	0	53	15344	12874	0	79664
		2	ಆಳಂದ	0	14	0	121	63	9	73802	1	3554	1189	0	3	0	0	0	363				23679	24	3827		106649
		3	ಚಿಂಚೋಳಿ	0	0	0	37	0	7	57538	0	7900	12257	0	0	0	0	0	0	0	0	0	8216	93	1585	0	87633
		4	ಚಿತ್ತಾಪೂರ	350	0	0	0	0	0	42675	0	3850	8450	0	0	0	0	0	0	0	0	0	50	6850	475	0	62700
		5	ಕಲಬುರಗಿ ಉತ್ತರ	0	0	0	0	0	0	0	0	0	0	0	0	0	0	0	0	0	0	0	0	0	0	0	0
		6	ಕಲಬುರಗಿ ದಕ್ಷಿಣ	0	6	0	30	27	10	62100	6	700	902	7	4	5	0	35	124	0	1	0	455	850	476	0	65738
		7	ಕಲಬುರಗಿ ಗ್ರಾಮೀಣ	0	13	0	19	71	5	77046	15	2164	3866	6	3	2	0	305	66	0	0	0	3730	4860	3227	0	95398
		8	ಜೇವರಗಿ	0	0	0	97	94	7	67125	0	26	560	0	0	0	7	53	0	0	0	0	0	62155	5500	0	135624
		9	ಸೇಡಂ	0	0	0	0	75	28	84015	5	6080	11475	10	25	0	90	30	45	0	0	0	610	940	460	0	103888
			ಜಿಲ್ಲೆಯ ಒಟ್ಟು	**350**	**33**	**0**	**555**	**346**	**66**	**514763**	**42**	**24402**	**39137**	**24**	**49**	**12**	**97**	**430**	**654**	**0**	**1**	**0**	**36793**	**91116**	**28424**	**0**	**737294**
18	ಕೊಡಗು	1	ಮಡಿಕೇರಿ	180	0	0	1332	0	0	0	0	0	0	0	0	0	0	0	0	0	0		0		0	0	**1512**
		2	ವಿರಾಜಪೇಟೆ	195	0		0																				**195**

ಕ್ರ. ಸಂ	ಜಿಲ್ಲೆ ಯ ಹೆಸರು	ಕ್ರ. ಸಂ	ಮತಕ್ಷೇತ್ರದ ಹೆಸರು	ಭತ್ತ	ಜೋಳ	ರಾಗಿ	ಮುಸುಕಿನಜೋಳ	ಸಜ್ಜೆ	ತೃಣ ಧಾನ್ಯ ಗಳು	ತೊಗರಿ	ಹುರುಳಿ	ಉದ್ದು	ಹೆಸರು	ಅಲಸಂದೆ ಮತ್ತು ಇತರೆ	ಅವರೆ	ಮಟಕಿ	ಶೇಂಗಾ	ಎಳ್ಳು	ಸೂರ್ಯಕಾಂತಿ	ಹರಳು	ಹುಚ್ಚೆಳ್ಳು	ಸಾಸಿವೆ	ಸೋಯಾಅವರೆ	ಹತ್ತಿ	ಕಬ್ಬು	ತಂಬಾಕು	ಒಟ್ಟು
			ಜಿಲ್ಲೆಯ ಒಟ್ಟು	375	0	0	1332	0	0	0	0	0	0	0	0	0	0	0	0	0	0	0	0	0	0	0	1707
19	ಕೋಲಾರ	1	ಬಂಗಾರಪೇಟೆ	0	0	0	0	0	0	192	0	0	0	0	0	0	254	0	0	0	0	0	0	0	0	0	446
		2	ಕೆ.ಜಿ.ಎಫ್.	0	0	0	0	0	0	584	0	0	0	0	0	0	1526	0	0	0	0	0	0	0	0	0	2110
		3	ಕೋಲಾರ	0	0	45	65	0	5	124	0	0	0	3	2	0	60	10	0	0	1	0	0	0	0	0	315
		4	ಮಾಲೂರು	7	0	55	58	0	16	61	0	0	0	21	85	0	42	46	0	0	0	0	0	0	6	0	397
		5	ಮುಳಬಾಗಿಲು	4	0	307	17	0	6	137	0	0	0	14	12	0	1635	0	0	0	0	0	0	0	0	0	2132
		6	ಶ್ರೀನಿವಾಸಪುರ	0	0	100	26	0		60	0	0	0	15	0	0	56	0	0	0	0	0	0	0	0	0	257
			ಜಿಲ್ಲೆಯ ಒಟ್ಟು	**11**	**0**	**507**	**166**	**0**	**27**	**1158**	**0**	**0**	**0**	**53**	**99**	**0**	**3573**	**56**	**0**	**0**	**1**	**0**	**0**	**0**	**6**	**0**	**5657**
20	ಕೊಪ್ಪಳ	1	ಕೊಪ್ಪಳ	0	270	0	36020	6500	80	2110	0	0	820	20	10	10	760	210	130	25	0	0	0	1310	0	0	48275
		2	ಕುಷ್ಟಗಿ	0	710	0	31150	10420	210	10360	0	0	4330	630	40	20	1300	3610	290	15	0	0	0	2110	0	0	65195
		3	ಯಲಬುರ್ಗಾ	0	440	0	34380	11950	250	5490	0	0	13020	70	50	20	1510	330	460	30	0	0	0	1030	0	0	69030
		4	ಗಂಗಾವತಿ	0	155	0	1170	1280	230	120	0	0	0	0	5	0	20	20	20	5	0	0	0	80	0	0	3105
		5	ಕನಕಗಿರಿ	0	192	0	4575	9920	710	7450	0	0	310	23	5	15	120	390	530	150	0	0	0	1580	0	0	25970
			ಜಿಲ್ಲೆಯ ಒಟ್ಟು	**0**	**1767**	**0**	**107295**	**40070**	**1480**	**25530**	**0**	**0**	**18480**	**743**	**110**	**65**	**3710**	**4560**	**1430**	**225**	**0**	**0**	**0**	**6110**	**0**	**0**	**211575**
21	ಮಂಡ್ಯ	1	ಮಂಡ್ಯ	0	0	0	0	0	0	2	0	8	6	292	0	0	0	26	0	0	0	0	0	0	102	0	436
		2	ಮದ್ದೂರು	0	0	13	2	0	0	36	88	82	101	415	39		24	294	0	11	0	0	0	0	1686	0	2791
		3	ಮಳವಳ್ಳಿ	0	0	0	12	0	0	2		42	36	368	0	0	135	1094	0	0	0	0	0	0	1400	0	3089
		4	ಶ್ರೀರಂಗಪಟ್ಟಣ	0	0	1	68	0	0	17	74	59	63	636	32	0	40	26	0	10	0	0	0	0	775	0	1801
		5	ಮೇಲುಕೋಟೆ	0	0	218	19	0	0	33		66	67	1126	0	0	0	202	0	0	0	0	0	0	295	0	2026
		6	ಕೆ.ಆರ್.ಪೇಟೆ	0	0	85	441	0	0	171	0	65	46	8215	0	0	2	706	0	0	0	0	0	0	376	0	10107
		7	ನಾಗಮಂಗಲ	0	0	2	0	0	0	128	21	48	36	3687	13	0	16	979	0	2	0	0	0	0	758	0	5690
			ಜಿಲ್ಲೆಯ ಒಟ್ಟು	**0**	**0**	**319**	**542**	**0**	**0**	**389**	**183**	**370**	**355**	**14739**	**84**	**0**	**217**	**3327**	**0**	**23**	**0**	**0**	**0**	**0**	**5392**	**0**	**25940**
22	ಮೈಸೂರು	1	ಹೆಚ್.ಡಿ.ಕೋಟೆ	0	0	143	19951	0	0	539	0	653	657	5790	58	0	0	145	0	56	0	0	0	20570	1473	3607	53642
		2	ಹುಣಸೂರು	0	0	350	11750	0	0	220	0	19	30	3700	1120	0	35	30	0	0	0	0	0	165	0	22550	39969
		3	ಕೆ.ಆರ್.ನಗರ	0	0	0	1475	0	0	0	0	25	70	5300	0	0	50	0	0	0	0	0	0	0	0	11700	18620
		4	ಪಿರಿಯಾಪಟ್ಟಣ	0	0	0	10500	0	0	0	0	0	0	50	0	0	0	0	0	0	0	0	0	0	0	25900	36450
		5	ಟಿ.ನರಸೀಪುರ	0	0	5	1127	0	0	35	0	2630	162	550	40	0	50	30	50	70	0	0	0	0	40		4789
		6	ನಂಜನಗೂಡು	0	3170	95	1830	97	0	0	85		1475	2265	2960	0	0	170	120	3620	28	0	0	0	7450	720	24085
		7	ಮೈಸೂರು	0	4	30	65	0	0	120	0	355	480	6740	298	0	0	0	0	0	0	0	0	126	90	8308	16616
		8	ವರುಣ	0	145	10	190	15	0	24	50	767	2165	2548	1120	0	80	56	6	45	10	0	0	10	260	2477	9978
			ಜಿಲ್ಲೆಯ ಒಟ್ಟು	**0**	**3319**	**633**	**46888**	**112**	**0**	**938**	**135**	**4449**	**5039**	**26943**	**5596**	**0**	**215**	**431**	**176**	**3791**	**38**	**0**	**0**	**20871**	**9313**	**75262**	**204149**
23	ರಾಯಚೂರು	1	ರಾಯಚೂರು(ನಗರ)			0	0	0	0	1643	0	0	0	0	0	0	0	0	0	0	0	0	0	1829	0	0	3472
		2	ರಾಯಚೂರು(ಗ್ರಾಮಿ	6295	0	0	0	225	75	5772	0	0	5	0	0	0	1490	0	0	0	0	0	0	59776	0	0	73638
		3	ಮಾನವಿ	4490	0	0	0	1260	135	18490	0	0	200	0	0	0	0	5	725	0	0	0	0	30420	43	0	55768
		4	ದೇವದುರ್ಗ	628	0	0	0	312	0	8120	0	0	15	0	0	0	34	0	50	0	0	0	0	55400	21	0	64580
		5	ಲಿಂಗಸಗೂರು	0	0	0	56	13244	7	33845	6	0	95	2	0	0	0	261	490	0	0	0	0	1108	194	0	49308
		6	ಸಿಂಧನೂರು	12	0	0	555	1597	380	7453	0	0	269	0	0	0	0	0	1438	0	0	0	0	2160	505	0	14369
		7	ಮಸ್ಕಿ	350	0	0	72	6476	214	27215	0	0	236	0	0	0	0	50	569	0	0	0	0	3043	23	0	38248
			ಜಿಲ್ಲೆಯ ಒಟ್ಟು	**11775**	**0**	**0**	**683**	**23114**	**811**	**100895**	**6**	**0**	**820**	**2**	**0**	**0**	**1524**	**316**	**3272**	**0**	**0**	**0**	**0**	**151907**	**786**	**0**	**295911**
24	ರಾಮನಗರ	1	ರಾಮನಗರ	0	0	50	0	0	0	14	0	0	0	60	0	0	0	0	0	0	0	0	0	0	0	0	124
		2	ಚನ್ನಪಟ್ಟಣ	0	0	150	0	0	0	28	0	0	0	124	0	0	0	60	0	0	0	0	0	0	0	0	362
		3	ಕನಕಪುರ	0	0	0	0	0	0	0	0	0	0	0	0	0	0	822	0	0	0	0	0	0	0	0	822
		4	ಹಾರೋಹಳ್ಳಿ	0	0	0	0	0	0	0	0	0	0	0	0	0	0	18	0	0	0	0	0	0	0	0	18
		5	ಮಾಗಡಿ	0	0	4000	0	0	0	120	0	0	0	180	280	0	0	0	0	0	0	0	0	0	0	0	4580
			ಜಿಲ್ಲೆಯ ಒಟ್ಟು	**0**	**0**	**4200**	**0**	**0**	**0**	**162**	**0**	**0**	**0**	**364**	**280**	**0**	**0**	**900**	**0**	**0**	**0**	**0**	**0**	**0**	**0**	**0**	**5906**
25	ಶಿವಮೊಗ್ಗ	1	ಶಿವಮೊಗ್ಗ ನಗರ	70	1	8	1868	0	0	10	0	0	1	12	0	0	1	0	0	0	0	0	0	12	6	0	1989.26
		2	ಶಿವಮೊಗ್ಗ ಗ್ರಮಾಂತ	350	7	51	9522	0	0	52	0	0	3	65	0	0	3	0	0	0	0	0	0	61	87	0	10201.45
		3	ಭದ್ರಾವತಿ	0	0	18	335	0	0	8	0	0	0	6	0	0	0	0	0	0	0	0	0	0	107	0	473.85
		4	ತೀರ್ಥಹಳ್ಳಿ	80	2	10	2270	0	0	11	0	0	1	14	0	0	1	0	0	0	0	0	0	14	65	0	2466.94
		5	ಸಾಗರ	990	0	0	1890	0	0	0	0	0	0	0	0	0	0	0	0	0	0	0	0	0	191	0	3070.5
		6	ಶಿಕಾರಿಪುರ	0	0	0	19500	0	0	20	0	0	0	0	0	0	0	0	0	0	0	0	0	40	0	0	19560
		7	ಸೊರಬ	6000	0	0	7435	0	0	0	0	0	0	0	0	0	28	0	0	0	0	0	0	32	109	0	13604
			ಜಿಲ್ಲೆಯ ಒಟ್ಟು	**7490**	**10**	**87**	**42820**	**0**	**0**	**101**	**0**	**0**	**4**	**98**	**0**	**0**	**32**	**0**	**0**	**0**	**0**	**0**	**0**	**159**	**565**	**0**	**51366**
26	ತುಮಕುರು	1	ಚಿಕ್ಕನಾಯಕನಹಳ್ಳಿ	5	0	200	40	0	30	187	40	43	868	450	5	0	275	6	0	9	0	0	0	271	0	0	2429
		2	ಗುಬ್ಬಿ	0	0	0	0	0	0	62	0	29	68	104	0	0	20	0	0	0	0	0	0	0	0	0	283

ಕ್ರ. ಸಂ	ಜಿಲ್ಲೆಯ ಹೆಸರು	ಕ್ರ. ಸಂ	ಮತಕ್ಷೇತ್ರದ ಹೆಸರು	ಭತ್ತ	ಜೋಳ	ರಾಗಿ	ಮುಸುಕಿನಜೋಳ	ಸಜ್ಜೆ	ತೃಣ ಧಾನ್ಯಗಳು	ತೊಗರಿ	ಹುರುಳಿ	ಉದ್ದು	ಹೆಸರು	ಅಲಸಂದೆ ಮತ್ತು ಇತರೆ	ಅವರೆ	ಮಟಕಿ	ಶೇಂಗಾ	ಎಳ್ಳು	ಸೂರ್ಯಕಾಂತಿ	ಹರಳು	ಹುಚ್ಚೆಳ್ಳು	ಸಾಸಿವೆ	ಸೋಯಾಅವರೆ	ಹತ್ತಿ	ಕಬ್ಬು	ತಂಬಾಕು	ಒಟ್ಟು
		3	ಕುಣಿಗಲ್	0	0	0	0	0	0	70	0	25	350	810	0	0	0	0	0	0	0	0	0	0	0	0	1255
		4	ತಿಪಟೂರು	0	0	0	51	0	0	128	0	91	511	273	0	0	0	19	0	9	0	0	0	0	0	0	1082
		5	ತುಮಕೂರು ನಗರ	0	1	5	0	0	0	1	0	0	0	1	0	0	0	0	0	0	0	0	0	0	0	0	8
		6	ತುಮಕೂರು ಗ್ರಾಮಾ	13	43	349	5	0	0	55	0	0	3	42	2	0	15	0	0	3	0	0	0	0	0	0	530
		7	ತುರುವೇಕೆರೆ	0	0	0	0	0	0	42	0	5	646	569	0	0	0	6	0	0	0	0	0	0	0	0	1268
		8	ಕೊರಟಗೆರೆ	95	7	3700	5958	0	0	808	0	0	1	44	13	0	5014	0	20	62	0	0	0	9	0	0	15731
		9	ಮಧುಗಿರಿ	14	0	698	3467	0	4	582	0	0	0	12	19	0	5284	0	0	0	0	0	0	134	0	0	10214
		10	ಪಾವಗಡ	95	20	55	1570	0	0	1890	70	0	0	55	5	0	8776	0	0	115	0	0	0	1275	0	0	13926
		11	ಶಿರಾ	5	0	385	20	0	0	445	10	0	0	40	20	0	1905	0	0	0	0	0	0	1685	0	0	4515
			ಜಿಲ್ಲೆಯ ಒಟ್ಟು	**227**	**71**	**5392**	**11111**	**0**	**34**	**4270**	**120**	**193**	**2447**	**2400**	**64**	**0**	**21289**	**31**	**20**	**198**	**0**	**0**	**0**	**3374**	**0**	**0**	**51241**
27	ಉಡುಪಿ	1	ಉಡುಪಿ	4070	0	0	0	0	0	0	0	0	0	0	0	0	0	0	0	0	0	0	0	0	0	0	4070
		2	ಕಾಪು	2050	0	0	0	0	0	0	0	0	0	0	0	0	0	0	0	0	0	0	0	0	0	0	2050
		3	ಕುಂದಾಪುರ	6215	0	0	0	0	0	0	0	0	0	0	0	0	0	0	0	0	0	0	0	0	0	0	6215
		4	ಬೈಂದೂರು	3690	0	0	0	0	0	0	0	0	0	0	0	0	0	0	0	0	0	0	0	0	0	0	3690
		5	ಕಾರ್ಕಳ	4420	0	0	0	0	0	0	0	0	0	0	0	0	0	0	0	0	0	0	0	0	0	0	4420
			ಜಿಲ್ಲೆಯ ಒಟ್ಟು	**20445**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**20445**
28	ಉತ್ತರಕನ್ನಡ	1	ಕಾರವಾರ-ಅಂಕೋಲ	1205	0	0	0	0	0	0	0	0	0	0	0	0	0	0	0	0	0	0	0	0	0		1205
		2	ಕುಮಟಾ-ಹೊನ್ನಾವ	1728	0	0	0	0	0	0	0	0	0	0	0	0	0	0	0	0	0	0	0	0	22		1750
		3	ಭಟ್ಕಳ	1280	0	0	0	0	0	0	0	0	0	0	0	0	0	0	0	0	0	0	0	0	0		1280
		4	ಶಿರಸಿ-ಸಿದ್ದಾಪುರ	731	0	0	350	0	0	0	0	0	0	0	0	0	0	0	0	0	0	0	0	0	50		1131
		5	ಮುಂಡಗೋಡ-ಯ	5678	0	0	4605	0	0	0	0	0	0	0	0	0	0	0	0	0	0	0	12	20	1671		11986
		6	ಹಳಿಯಾಳ-ಜೊಯಿ	5870	0	0	3630	0	0	0	0	0	0	0	0	0	0	0	0	0	0	0	0	30	11665		21195
			ಜಿಲ್ಲೆಯ ಒಟ್ಟು	**16492**	**0**	**0**	**8585**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**0**	**12**	**50**	**13408**	**0**	**38547**
29	ವಿಜಯನಗರ	1	ಹೊಸಪೇಟೆ	1700	1046	45	4350	510	360	310	0	0	0	20	0	0	0	0	356	0	0	0	0	320	1498	0	10515
		2	ಕೂಡ್ಲಿಗಿ	0	3820	654	18180	485	25	1462	0	0	26	0	0	0	5895	14	1659	0	0	0	0	955	0	0	33175
		3	ಕೊಟ್ಟೂರು	0	521	325	23678	341	0	375	0	0	25	0	0	0	845	0	512	0	0	0	0	134	0	0	26756
		4	ಹಗರಿಬೊಮ್ಮನಹಳ್ಳಿ	0	606	63	19796	1332	2	1169	0	0	2	0	0	0	831	10	687	0	0	0	0	75	0	0	24573
		5	ಹಡಗಲಿ	620	714	12	44274	410	21	1740	0	0	5	0	0	0	660	0	1422	0	0	0	4	268	520	0	50670
		6	ಹರಪನಹಳ್ಳಿ	0	179	15	69821	57	34	3862	0	0	15	15	0	0	1542	10	178	0	0	0	2	16	12	0	75758
			ಜಿಲ್ಲೆಯ ಒಟ್ಟು	**2320**	**6886**	**1114**	**180099**	**3135**	**442**	**8918**	**0**	**0**	**73**	**35**	**0**	**0**	**9773**	**34**	**4814**	**0**	**0**	**0**	**6**	**1768**	**2030**	**0**	**221447**
30	ವಿಜಯಪುರ	1	ಬ.ಬಾಗೇವಾಡಿ	0	0	0	22000	980	5	51280	5	0	36	0	0	2	18	1	16	0	0	0	0	156	7100	0	81599
		2	ವಿಜಯಪುರ	0	0	0	650	405	5	5850	2	5	8	0	0	0	25	0	10	0	0	0	0	23	500	0	7483
		3	ಬಬಲೇಶ್ವರ	0	0	0	11000	1500	5	22000	4	96	200	0	0	2	55	0	139	0	0	0	0	30	6850	0	41881
		4	ಇಂಡಿ	0	0	0	9017	4746	30	59280	5	70	55	0	0	2	290	0	70	0	0	0	0	5800	4405	0	83770
		5	ನಾಗಠಾಣ	0	0	0	17500	5700	35	65530	9	130	255	2	0	0	320	0	197	0	0	0	0	5450	5250	0	100378
		6	ಮುದ್ದೇಬಿಹಾಳ್	0	0	0	3200	1500	5	43600	10	25	34	5	0	5	125	4	210	0	4	0	0	3377	3450	0	55554
		7	ಸಿಂದಗಿ	0	0	0	1200	288	5	51350	5	6	50	0	0	0	72	0	214	0	0	0	0	32246	7450	0	92886
		8	ದೇವರಹಿಪ್ಪರಗಿ	0	0	0	1100	550	6	71260	8	0	38	0	0	2	40	2	225	0	0	0	0	6100	1050	0	80381
			ಜಿಲ್ಲೆಯ ಒಟ್ಟು	**0**	**0**	**0**	**65667**	**15669**	**96**	**370150**	**48**	**332**	**676**	**7**	**0**	**13**	**945**	**7**	**1081**	**0**	**4**	**0**	**0**	**53182**	**36055**	**0**	**543932**
31	ಯಾದಗಿರಿ	1	ಯಾದಗಿರಿ	1162	10	0	6	250	0	20527	0	10	3238	0	0	0	85	0	17	0	0	0	0	32241	105	0	57651
		2	ಗುರುಮಿಟಕಲ್	11597	0	0	0	210	0	25435	0	100	12266	50	0	0	260	0	197	0	0	0	0	37537	10	0	87662
		3	ಶಹಾಪೂರ	266	13	0	12	1306	0	22295	0	0	480	0	0	0	83	0	13	0	0	0	0	48300	165	0	72933
		4	ಸುರಪೂರ	1260	0	0	7	3044	0	23241	0	0	5	0	0	0	0	0	65	0	0	0	0	37526	347	0	65495
			ಜಿಲ್ಲೆಯ ಒಟ್ಟು	**14285**	**23**	**0**	**25**	**4810**	**0**	**91498**	**0**	**110**	**15989**	**50**	**0**	**0**	**428**	**0**	**292**	**0**	**0**	**0**	**0**	**155604**	**627**	**0**	**283741**
	ರಾಜ್ಯದ ಒಟ್ಟು			149687	47129	51234	1340253	111173	31189	1333378	875	84782	401608	57540	9672	401	170952	12402	42583	5197	386	54	426509	603953	581856	85713	5548525

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)